# ಮಾಸ ಭವಿಷ್ಯ

**ಜುಲೈ, 2019**

## ಮೇಷ




ಫಲಿತಾಂಶಕ್ಕಾಗಿ ಹಾತೊರೆಯದೇ ನಿಮ್ಮ ಕೆಲಸಗಳಲ್ಲಿ ನಿರತರಾಗಿ. ಬದುಕಿನ ಉತ್ತಮ ಮಾರ್ಗದ ಆಯ್ಕೆ ನಿಮ್ಮ ಕಣ್ಣ ಮುಂದಿದೆ. ಎಡವಿದರೆ ಮುಂದೆ ಪಶ್ಚಾತ್ತಾಪ ಪಡುವಿರಿ. ವ್ಯವಹಾರ ನಿಧಾನಕ್ಕೆ ಮೇಲೇರುತ್ತದೆ.

**ಶುಭ:** 1, 12, 11

**ಅಶುಭ:** 6, 8, 18

## ಕರ್ಕಾಟಕ



ನಿಮ್ಮ ಕೆಲಸ ಮುಗಿದಿದೆ; ಫಲಾಫಲಗಳ ಬಗ್ಗೆ ಚಿಂತಿಸಬೇಡಿ. ದೈವಾನುಗ್ರಹ ಸಂಪಾದಿಸುವ ಕೆಲಸ ರೂಢಿಸಿಕೊಳ್ಳಿ. ಇರುವ ಸಂಪತ್ತನ್ನು ರಕ್ಷಿಸಿಕೊಂಡು ಹೋಗುವುದೇ ದೊಡ್ಡ ಸವಾಲು. ಅಗತ್ಯ ವಿಶ್ರಾಂತಿ ಪಡೆಯಿರಿ.

**ಶುಭ:** 4, 8, 12

**ಅಶುಭ:** 14, 9, 20

## ವೃಷಭ




ಧನಾಗಮನ. ಬಾಳಿನಲ್ಲಿ ಹೊಸ ದಿಸೆ. ಅನಗತ್ಯ ಆತಂಕ, ಚಿಂತೆ ಬೇಡ. ಬಂದದ್ದು ಬರಲಿ ಎಂದು ಮಾಡುವ ಕೆಲಸದಲ್ಲಿ ಶುದ್ಧ ಚಿತ್ತದಿಂದ ಮುನ್ನಡೆಯಿರಿ. ಶೈಕ್ಷಣಿಕ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ.

**ಶುಭ:** 3, 16, 19

**ಅಶುಭ:** 12, 21, 23

## ಸಿಂಹ



ಕಾರ್ಯಕ್ಷಮತೆಯೇ ಕುಂದಿತೇನೊ ಎಂಬಂತೆ ಕೆಲಸಗಳಲ್ಲೆಲ್ಲ ತಪ್ಪು ಕಂಡುಬರುತ್ತಿವೆ. ಅದನ್ನು ಸರಿಪಡಿಸುವ ಹೊಣೆಯನ್ನು ನೀವೇ ವಹಿಸಿಕೊಳ್ಳಿ. ಮಾತಿನಿಂದ ಮನೆ ಕಟ್ಟುವವರನ್ನು ನಂಬಬೇಡಿ. ಶುಭ ಸಮಯ ಹತ್ತಿರವಿದೆ.

**ಶುಭ:** 5, 20, 10

**ಅಶುಭ:** 4, 12, 13, 24

## ಮಿಥುನ



ಅನುಭವಕ್ಕೆ ದಕ್ಕದ್ದನ್ನು ಒದಗಿಸಿಕೊಳ್ಳುವ ಬಯಕೆ. ಅದನ್ನು ನನಸಾಗಿಸಿಕೊಳ್ಳುವ ಬಗ್ಗೆ ಅವಿರತ ಪ್ರಯತ್ನವೂ ಮುಂದುವರೆಯಲಿದೆ. ದೇಹಾರೋಗ್ಯದ ಬಗ್ಗೆ ಗಮನಹರಿಸಿ. ಪೇಯಾದಿಗಳಿಗೆ ಗಮನಕೊಡಿ.

**ಶುಭ:** 13, 23, 6

**ಅಶುಭ:** 4, 7, 24

## ಕನ್ಯಾ



ಭ್ರಮಾಲೋಕದಿಂದ ತೆರವಾದ ಮನಸ್ಸು ವಾಸ್ತವವನ್ನು ಬಲು ನಿಧಾನವಾಗಿ ಅರ್ಥೈಸಿಕೊಳ್ಳುತ್ತಿದೆ. ಕೆಲಸಗಳಿಗೆ ಅಡೆತಡೆಗಳು ಬಂದರೂ ಆಂತರಿಕವಾದ ಜಾಗೃತಿಯಿಂದ ಒಳ್ಳೆಯದೇ ಆಗಲಿದೆ. ಮುನ್ನುಗ್ಗಿ.

**ಶುಭ:** 6, 18, 24

**ಅಶುಭ:** 5, 11, 21